# ಸಮಕಾಲೀನ ಮಹಾಕರುಣಿ ಬುದ್ಧ

ಕೆ.ಎಲ್. ಪದ್ಮಿನಿ

### ಭಾಗ ೨

**ಬುದ್ಧ ಮತ್ತು ಬೋಧಿಸತ್ವರ ಕರುಣೆಯ ಬೆಳಕು**

ಮರಣಾನಂತರದ ೪೯ ದಿನಗಳ ಮಿತಿಯಲ್ಲಿ ಮೃತನು ಮುಖಾಮುಖಿಯಾಗುವ ಮಾರ್ಗದರ್ಶಕ ಮತ್ತು ದಿಕ್ಕು ತಪ್ಪಿಸುವ ಎರಡೂ ರೀತಿಯ ಬೆಳಕಿನ ಸ್ವರೂಪ ಹೇಗಿರುತ್ತದೆ, ಮೃತನಿಗೆ ಬುದ್ಧ ಮತ್ತು ಬೋಧಿಸತ್ವರ ಕರುಣೆಯ ಬೆಳಕು ಹೇಗೆ ದೊರೆಯುತ್ತದೆ ಎಂಬದನ್ನು 'ಟಿಬೆಟಿಯನ್ ಬುಕ್ ಆಫ್ ಡೆಡ್' ಕೃತಿ ಸಾಕಷ್ಟು ಆಕರ್ಷಕವಾಗಿ ವರ್ಣಿಸುತ್ತದೆ. ಹಾಗೆಯೇ ಅದನ್ನು ಸ್ವೀಕರಿಸದೆ ಒಬ್ಬ ಯಾಕೆ ಅದರಿಂದ ದೂರ ಸರಿಯಬಹುದು ಎಂಬ ವಿವರವನ್ನು ಒಬ್ಬ ಮರಣಾನಂತರ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯಾಗಿ ಕೊಡುತ್ತದೆ. ಇದನ್ನು ಹಂತ ಹಂತವಾಗಿ ವಿವರಿಸುತ್ತದೆ:

೧. ಒಬ್ಬನು ಪ್ರಾಪಂಚಿಕ ಜೀವನದಲ್ಲಿ ಕೆಟ್ಟ ಕರ್ಮಗಳನ್ನು ಮಾಡಿ ಪರಮ ವಾಸ್ತವತೆಯ ಅರಿವನ್ನು ಪಡೆಯುವ ಸಾಧ್ಯತೆಯನ್ನು ವ್ಯರ್ಥಗೊಳಿಸಿರಬಹುದು. ಮರಣದ ಸಮಯದಲ್ಲಿಯೂ ರಕ್ಷಾದೇವತೆ ಧ್ಯಾನಿಬುದ್ಧನನ್ನು ಸ್ಮರಿಸದಿರಬಹುದು. ಆದರೂ ಮರಣ ಹೊಂದುತ್ತಿದ್ದಂತೆಯೇ ಅವನಿಗೂ ಪರಮ ಬೋಧೆಯ ಬೆಳಕಿನ ದರ್ಶನವಾಗುತ್ತದೆ. ಅದನ್ನು ಗುರುತಿಸಿ ಅದರಲ್ಲಿ ತನ್ನನ್ನು ವಿಲೀನಗೊಳಿಸಿಕೊಂಡರೆ ಅವನು ಖಂಡಿತವಾಗಿ ಮುಕ್ತನಾಗುತ್ತಾನೆ. ಹಾಗಾಗದಿದ್ದರೆ ಅವನು ಚೋನಿಡ್ ಬಾರ್ಡೋಗೆ ಎದುರಾಗುತ್ತಾನೆ. ಅಲ್ಲಿ ಕ್ಷಣಕಾಲ ಪ್ರಕಾಶಮಾನವಾದ, ಬೆರಗುಗೊಳಿಸುವ, ಹೊಳೆಯುತ್ತಿರುವ, ಆಕರ್ಷಕ ಕಿರಣಗಳನ್ನು ಸೂಸುತ್ತಿರುವ ಬೆಳಕು ಕಾಣುತ್ತದೆ. ಅದರೊಂದಿಗೆ ಸಾವಿರ ಗುಡುಗುಗಳಂತಹ ಶಬ್ದವೂ ಬರುತ್ತದೆ. ಆ ಶಬ್ದವಾಗಲೀ ಕಣ್ಣು ಕುಕ್ಕುವ ಬೆಳಕಾಗಲೀ ಯಾವ ಹಾನಿಯನ್ನೂ ಮಾಡುವುದಿಲ್ಲ ಎಂದು ತಿಳಿಯಬೇಕು. ಅದಕ್ಕೆ ಅಚ್ಚರಿಪಡಬಾರದು. ಬೆದರಲೂಬಾರದು. ಆ ಬೆಳಕಿನ ರೂಪದ ಶುದ್ಧಸತ್ಯವೇ ತಾನು ಎಂದು ಗುರುತಿಸಬೇಕು, ಅದರೊಂದಿಗೆ ಲೀನವಾಗಬೇಕು. ಆಗ ಖಂಡಿತವಾಗಿ ಮುಕ್ತನಾಗುತ್ತಾನೆ. ಅದು ಸಾಧ್ಯವಾಗದಿದ್ದರೆ ಅವನು ಮೂರ್ಛಾವಸ್ಥೆಗೆ ಹೋಗುತ್ತಾನೆ.

೨. ಎಚ್ಚರಗೊಂಡಾಗ ಸ್ವರ್ಗಾಕಾಶಮಾತೆಯೊಂದಿಗೆ ಶ್ವೇತವರ್ಣದ ವೈರೋಚನ ಬುದ್ಧ ಇದಿರಾಗುತ್ತಾನೆ. ಅವನ ಹೃದಯದಿಂದ ನೀಲಿಬಣ್ಣದ ಬೆಳಕಿನ ಮಾತಾಪಿತೃರೂಪೀ ಧರ್ಮಧಾತು ವಿವೇಕವು ಧಾವಿಸಿ ಬರುತ್ತದೆ, ಅವನ ಹೃದಯಕ್ಕೆ ಬಲವಾಗಿ ತಾಗುತ್ತದೆ, ತನ್ನ ಕಡೆಗೆ ಸೆಳೆಯುತ್ತದೆ. ಈ ಘನಮೊತ್ತದ ನೀಲಿ ಬೆಳಕಿನೊಂದಿಗೆ ಮಂದವಾದ ಬಿಳಿಬೆಳಕೂ ಇದಿರಾಗುತ್ತದೆ.



ಅತ್ಯಂತ ಪ್ರಖರವಾದ ನೀಲಿಬೆಳಕಿನ ಧರ್ಮಧಾತು ವಿವೇಕವನ್ನು ತ್ಯಜಿಸಿ ಮಂದ ಬೆಳಕಿನ ಕಡೆಗೆ ಪಲಾಯನ ಮಾಡದಿದ್ದರೆ ಖಂಡಿತವಾಗಿ ವೈರೋಚನನ ಜ್ಞಾನ ವ್ಯೂಹ ಕ್ಷೇತ್ರದಲ್ಲಿ ಸಂಭೋಗಕಾಯ-ಬುದ್ಧತ್ವವನ್ನು ಪಡೆಯುತ್ತಾನೆ. ಮಂದ ಬೆಳಕಿನ ಕಡೆಗೆ ಮುಂದುವರಿದರೆ ಮುಕ್ತಿಮಾರ್ಗ ಕಾಣದೆ ಅಲೆದಾಡುತ್ತಿರುತ್ತಾನೆ.

೩. ಆಗ ನೀಲಿಮಿಶ್ರಿತ ಸುವರ್ಣ ಬಣ್ಣದ ಗಾಢವಾದ ಪ್ರಕಾಶಮಾನ ಬೆಳಕಿನ ಆವರಣದಲ್ಲಿ ವಜ್ರಸತ್ವ ಅಕ್ಷೋಭ್ಯ ಬುದ್ಧನು ಸ್ತ್ರೀ ಬೋಧಿಸತ್ವ, ಪುರುಷ ಬೋಧಿಸತ್ವ ಮತ್ತು ತಾಯಿ ಮಾಮಕಿಯೊಂದಿಗೆ ಸುಖೀಕ್ಷೇತ್ರದಿಂದ ಬಂದು ಇದಿರಾಗುತ್ತಾನೆ. ಅವನ ಹೃದಯದಿಂದ ಶುದ್ಧರೂಪದ ವಿವೇಕದ ಪ್ರಜ್ಞಾತತ್ವ ಮೊತ್ತವು ಪಾರದರ್ಶಕವಾಗಿ ಆದರೆ ಕಣ್ಣು ಕುಕ್ಕುವ ಶ್ವೇತವರ್ಣದ ಪ್ರಕಾಶದೊಂದಿಗೆ ಧಾವಿಸಿ ಬರುತ್ತದೆ, ಇವನ ಹೃದಯವನ್ನು ಘಾತಿಸುತ್ತದೆ. ಅದರೊಂದಿಗೆ ಮಂದ ಹೊಗೆ ಬಣ್ಣದ ಬೆಳಕೂ ಸಹ ಬರುತ್ತದೆ. ಪ್ರಕಾಶಮಾನ ಬಿಳಿ ಬೆಳಕಿನ ಬುದ್ಧ, ಬೋಧಿಸತ್ವರ ಕೃಪೆಯನ್ನು ಗುರುತಿಸಿ ಆ ಬೆಳಕಿನಲ್ಲಿ ಲೀನವಾದರೆ ಅಭಿರತಿ ನಂದನವನದಲ್ಲಿ ಸಾಧನೆ ಮಾಡಿ ಸಂಭೋಗಕಾಯ-ಬುದ್ಧತ್ವವನ್ನು ಪಡೆಯುತ್ತಾನೆ. ಮಂದ ಹೊಗೆ ಬಣ್ಣದ ದಾರಿಯನ್ನು ಹಿಡಿದರೆ ಭಯ ಭೀತಿಗಳಿಂದ ಒದ್ದಾಡುತ್ತಾ ಅಲೆದಾಡುತ್ತಾನೆ.

೪. ಕೃಪಾಕಿರಣಗಳು ಹೃದಯವನ್ನು ಬಲವಾಗಿ ಪ್ರವೇಶಿಸಿದರೂ ಗರ್ವದಿಂದ ಬೆಳಕಿನ ಆಶ್ರಯದಿಂದ ಓಡಿಹೋದರೆ ಇವನನ್ನು ಉದ್ಧರಿಸಲು ರತ್ನಸಂಭವ ಬುದ್ಧನು ದೇವತೆಗಳು, ದೇವಿಮಾತೆ ಸಂಗ್ಯೈ, ಆಕಾಶಭದ್ರ ಮತ್ತು ಸಮಂತಭದ್ರ, ಬೋಧಿಸತ್ವರು, ಮಹ್ಲೈಮ ಮತ್ತು ಧೂಪೇಮ ಸ್ತ್ರೀ ಬೋಧಿಸತ್ವರು ಇವ

ರೊಂದಿಗೆ ಇದಿರಾಗುತ್ತಾನೆ. ಅವನ ಹೃದಯದಿಂದ ಸಮಾನತೆ-ವಿವೇಕದ ಜಾಜ್ವಲ್ಯಮಾನ ಹಳದಿ ಬಣ್ಣದ ಬೆಳಕು ಧಾವಿಸಿ ಬರುತ್ತದೆ, ಇವನ ಹೃದಯವನ್ನು ಬಲವಾಗಿ ತಟ್ಟುತ್ತದೆ. ಅದರೊಂದಿಗೆ ಮಂದ ಹಳದಿಮಿಶ್ರಿತ ನೀಲಿ ಬೆಳಕೂ ಬರುತ್ತದೆ. ಅಹಂಕಾರದಿಂದ ವಿವೇಕಯುತ ಬೆಳಕಿನ ಕೃಪೆಗೆ ತಲೆಬಾಗದೆ ಭಯಪಟ್ಟು ಓಡಿಹೋಗಬಾರದು, ರತ್ನಸಂಭವಬುದ್ಧನಲ್ಲಿ ಲೀನವಾಗಬೇಕು. ಅದರಿಂದ ಅವನ ಶ್ರೀಮತ್ ನಂದನವನದಲ್ಲಿ ಸಾಧನೆ ಮಾಡಿ ಸಂಭೋಗಕಾಯ-ಬುದ್ಧತ್ವವನ್ನು ಪಡೆಯುತ್ತಾನೆ. ಹಳದಿ ಮಿಶ್ರಿತ ನೀಲಿ ಬೆಳಕನ್ನು ಅನುಸರಿಸಿದರೆ ಅಸ್ಪಷ್ಟತೆ, ಗೊಂದಲ, ಭಯ ಭೀತಿಗಳಿಂದ ತೊಳಲಾಡುತ್ತಿರುತ್ತಾನೆ.

೫. ಆಗ ಅಮಿತಾಭ ಬುದ್ಧನು ದೇವತೆಗಳು, ದೇವಮಾತೆ ಗೋಕರ್ಮೊ, ಇಬ್ಬಿಬ್ಬರು ಸ್ತ್ರೀ ಪುರುಷ ಬೋಧಿಸತ್ವರೊಂದಿಗೆ, ಬೆಳಕಿನ ಕಿರಣಗಳುಳ್ಳ ಆಕಾಶಕಾಯಗಳು, ವಲಯಮಂಡಲಗಳೊಂದಿಗೆ ಬೆಳಕಿನ ಪಥದಲ್ಲಿ ಇದಿರಾಗುತ್ತಾನೆ. ಅವನ ಹೃದಯದಿಂದ ವಿವೇಚನಾ ವಿವೇಕವು ಅತಿಯಾಗಿ ಹೊಳೆಯುತ್ತಿರುವ ಕೆಂಪು ಬೆಳಕಾಗಿ ಧಾವಿಸಿ ಬಂದು ಇವನ ಹೃದಯವನ್ನು ತೀವ್ರವಾಗಿ ತಟ್ಟುತ್ತದೆ. ಅಮಿತಾಭನ ಕೃಪೆಯನ್ನು ಗುರುತಿಸಿ ಆ ಬೆಳಕಿನಲ್ಲಿ ಸಂಲಗ್ನಗೊಂಡರೆ ಸರ್ವಪರಿಪೂರ್ಣತೆಯ ಸಂಭೋಗಕಾಯ-ಬುದ್ಧತ್ವವನ್ನು ಅಮಿತಾಭನ ಸುಖವತಿ ನಂದನವನದಲ್ಲಿ ಸಾಧನೆ ಮಾಡಿ ಪಡೆಯುತ್ತಾನೆ. ಹಾಗಾಗದಿದ್ದರೆ ಅಭ್ಯಾಸಬಲದ ವಿಷಯವಾಸನೆಗಳ ಪ್ರಭಾವಕ್ಕೆ ಸಿಲುಕಿ ಮಿಡುಕಾಡುತ್ತಾ ಅಲೆದಾಡುತ್ತಾನೆ.

೬. ಅತಿಯಾದ ವ್ಯಾಮೋಹದಿಂದ ಅಸುಖಿಯಾಗಿರುವ ಇವನನ್ನು ಪಾರುಮಾಡಲು ಈಗ ಅಮೋಘಸಿದ್ಧಿ ಬುದ್ಧನು ದೇವತೆಗಳು, ದೇವಮಾತೆ ಡೋಲ್ಮ, ಇಬ್ಬಿಬ್ಬರು ಸ್ತ್ರೀ ಪುರುಷ ಬೋಧಿಸತ್ವರು ಇವರೊಂದಿಗೆ ಕಾಮನ ಬಿಲ್ಲಿನ ಬೆಳಕಿನ ಪ್ರಭಾವಲಯದಲ್ಲಿ ಹೊಳೆಯುತ್ತಾ ಇದಿರಾಗುತ್ತಾನೆ. ಅವನ ಹೃದಯದಿಂದ ಇಚ್ಛಾ ಸಂಕಲ್ಪಗಳನ್ನೆಲ್ಲಾ ಈಡೇರಿಸುವ ವಿವೇಕವು ಜಾಜ್ವಲ್ಯಮಾನ ಪ್ರಭಾವಳಿಗಳ ವಲಯಗಳಿಂದ ಸುತ್ತುವರಿದ ದಟ್ಟ ಹಸಿರು ವರ್ಣದ ಬೆಳಕಿನಂತೆ ಧಾವಿಸಿ ಬಂದು ಇವನ ಹೃದಯವನ್ನು ಬಲವಾಗಿ ಒಡಿಯುತ್ತದೆ. ಎಲ್ಲವನ್ನೂ ಜಯಪ್ರದವಾಗಿಸುವ ಬೆಳಕಿನ ಪಥಕ್ಕೆ ವಿಮುಖನಾಗಿ ಪಲಾಯನ ಮಾಡಬಾರದು, ಅಮೋಘಸಿದ್ಧಿ ಬುದ್ಧನ ಕೃಪಾವಲಯದಲ್ಲಿ ವಿಲೀನಗೊಳ್ಳಬೇಕು. ಆಗ ಅವನು ಬಾರ್ಡೋನ ಸಂಚಿನ ಎಲ್ಲಾ ರೀತಿಯ ದಾಳಿಯಿಂದ ರಕ್ಷಿಸಲ್ಪಡುತ್ತಾನೆ, ಪ್ರಕುತ ನಂದನವನದಲ್ಲಿ ಸಾಧನೆ ಮಾಡಿ ಸಂಭೋಗಕಾಯ-ಬುದ್ಧತ್ವವನ್ನು ಪಡೆಯುತ್ತಾನೆ.

೭. ಮಂದ ಹಸಿರು ಬೆಳಕಿನ ಪಥವನ್ನು ಆರಿಸಿಕೊಂಡರೆ ಬಗೆ ಬಗೆಯ ಭಯ ಭೀತಿಗಳ ವರ್ತುಲದಲ್ಲಿ ಸುತ್ತುತ್ತಿರುತ್ತಾನೆ. ಹೀಗಿದ್ದರೂ ಇವನನ್ನು ಹೇಗಾದರೂ ಬೆಳಕಿನ ಸನ್ಮಾರ್ಗಪಥಕ್ಕೆ ತರಬೇಕೆಂದು ಐದೂ ಬುದ್ಧರು ತಂತಮ್ಮ ಎಲ್ಲಾ ಸಹಚರಿಗಳೊಂದಿಗೆ ಆರೂ ಲೋಕಗಳಿಂದ ಹೊರಟ ಬೆಳಕಿನೊಂದಿಗೆ ಒಟ್ಟಿಗೇ ಇದಿರಾಗುತ್ತಾರೆ, ಸ್ಪಷ್ಟವಾದ ಅಂದವಾದ ಪ್ರಕಾಶಮಾನವಾದ ಬೆಳಕಿನ ಮಂಡಲದಂತಹ ವಿವೇಕಗಳು ಒಟ್ಟುಗೂಡಿದ ಪ್ರಭೆಗಳಿಂದ ಇವನ ಹೃದಯಕ್ಕೆ ತಾಗುತ್ತಾರೆ. ಈ ಬೆಳಕು ತನ್ನಲ್ಲಿ ಅಂತರ್ಗತವಾಗಿರುವ ಆದರೆ ಮೂರ್ತರೂಪದಲ್ಲಿ ತನಗೆ ಪ್ರಕಟವಾಗಿರುವ ಐದು ರೀತಿಯ ವಿವೇಕ, ಜಾಗೃತಿ, ಅರಿವು, ಪರಮವಾಸ್ತವತೆ ಎಂಬುದನ್ನು ಗುರುತಿಸಬೇಕು. ಅದನ್ನು ತನ್ನ ಪರಮಸ್ನೇಹಿತ, ಹಿತಾಕಾಂಕ್ಷಿ ಮಾತಾಪಿತೃ ಎಂದು ನಂಬಬೇಕು. ಶ್ರದ್ಧೆಯಿಂದ ಈ ಐದು ಬುದ್ಧರಲ್ಲಿ ಯಾರ ಬೆಳಕಿನ ಪಥದಲ್ಲಾದರೂ ಮುಂದುವರೆಯಬೇಕು. ಆ ಬುದ್ಧನ ಕರುಣೆ, ಅನುಕಂಪೆಗಳು ಬಿಡದೆ ಇವನನ್ನು ಸೆಳೆದುಕೊಳ್ಳುತ್ತವೆ; ಇವನು ಅವರ ಸ್ವಕ್ಷೇತ್ರದಲ್ಲಿ ವಾಸವಾಗಿದ್ದು ಸಮಸ್ತ ಒಳಿತಿನ, ಶುದ್ಧಪ್ರೀತಿಯ, ಪರಿಪೂರ್ಣ ವಿಕಾಸದ ಸಂಭೋಗಕಾಯ-ಬುದ್ಧತ್ವವನ್ನು ನಿಶ್ಚಯವಾಗಿ ಹೊಂದುತ್ತಾನೆ.

೮. ಹಾಗಾಗದಿದ್ದರೆ ಐದು ಧ್ಯಾನಿಬುದ್ಧರ ಪವಿತ್ರ ಸ್ವರ್ಗೀಯ ವಲಯಗಳಿಂದ ಜ್ಞಾನಧಾರಿ ದೇವತೆಗಳು ದೇವಮಾತೆಯರಾದ ಡಾಕಿನಿಯರೊಂದಿಗೆ ವಶೀಕರಣದ ನೃತ್ಯ ಮಾಡುತ್ತಾ ಅರೆ ಕೋಪ ಅರೆ ನಗುವಿನೊಂದಿಗೆ ಇದಿರಾಗುತ್ತಾರೆ. ಇವರೊಂದಿಗೆ ಒರಟು ಕಾಡು-ಪ್ರಪಂಚಕ್ಕೆ ಸೆಳೆದೊಯ್ಯುವ ಭಾವೋದ್ವಿಗ್ನತೆ, ಅಸ್ಪಷ್ಟತೆ, ಮೂರ್ಖತನಗಳ ಲೋಕದವರೂ ಇದಿರಾಗುತ್ತಾರೆ. ಏಕಕಾಲಿಕವಾಗಿ ಮೂಡಿದ ಐದು ವಿವೇಕಪ್ರಭೆಗಳಿಂದ ಶುದ್ಧಗೊಂಡ ವಿಷಯವಾಸನೆಗಳ ಬೆಳಕು ಜ್ಞಾನಧಾರಿ ದೇವತೆಗಳ ಹೃದಯದಿಂದ ಮೂಡಿಬರುತ್ತದೆ, ಇವನ ಹೃದಯಕ್ಕೆ ಬಲವಾಗಿ ತಾಗುತ್ತದೆ. ಅದರೊಂದಿಗೆ ಅಸಭ್ಯ ಒರಟು ರೂಕ್ಷ ಪ್ರಪಂಚದಿಂದ ಮಂದವಾದ ನೀಲಿ ಬೆಳಕು ಬಡಿಯುತ್ತದೆ. ಜ್ಞಾನಧಾರಿ ದೇವತೆಗಳಲ್ಲಿ ಶ್ರದ್ಧೆಯಿರಿಸಿ ಒಂದೇ ಮನಸ್ಸಿನಿಂದ ಅವುಗಳ ಕೃಪೆಯನ್ನು ಧ್ಯಾನಿಸಿದರೆ ಖಂಡಿತವಾಗಿ ಉದ್ಧಾರದ ಪಥದಲ್ಲಿ ನಡೆಯುತ್ತಾನೆ.

ಹೀಗೆ ಮರಣಾನಂತರದ ಸ್ಥಿತಿಗತಿಯನ್ನು ಆಶಾದಾಯಕವಾಗಿ ವಿವರಿಸುವ 'ಟಿಬೆಟಿಯನ್ ಬುಕ್ ಆಫ್ ದಿ ಡೆಡ್' ಕೇವಲ ಒಂದು ಕೃತಿ ಆಗಿರದೆ ಮರಣದ ಘಳಿಗೆಯಲ್ಲಿರುವವನನ್ನೂ ಶಾಂತವಾಗಿರಿಸಲು, ಮರಣಾನಂತರ ತನ್ನ ಮುಂದಿನ ಗತಿಯನ್ನು ಸರಿಯಾದ ದಿಕ್ಕಿನಲ್ಲಿ ರೂಪಿಸಿಕೊಳ್ಳಲು ಮತ್ತು ಅನಿವಾರ್ಯವಾದರೆ ಪುನರ್ಜನ್ಮವನ್ನು ಸರಿಯಾದ ಮನಸ್ಥಿತಿಯಲ್ಲಿ ಪಡೆಯಲು ಸಹಕಾರಿಯಾಗುವ ಮಾರ್ಗದರ್ಶಕ ಬೆಳಕು ಮತ್ತು ದಾರಿ ತಪ್ಪಿರುವವರಿಗೆ ದಾರಿ ತೋರುವ ಕರುಣಾ-ಬೆಳಕು ಇವೆರಡರ ಪ್ರತೀಕವಾಗಿದೆ.

## ಆಶಾವಾದ

### ಪ್ರಸ್ತುತತೆ

ಬುದ್ಧನ ಕಾಲದ ದುಃಖತೀವ್ರತೆ ಇಂದು ಇಲ್ಲ. ಸಮಾಜವಾದೀ ಪ್ರಜಾಪ್ರಭುತ್ವ ಮಾದರಿಯ ಇಂದಿನ ಬದುಕು ಪ್ರತಿ

ಯೊಬ್ಬನ ಗೌರವಯುತವಾಗಿ ಬದುಕುವ ಮಾನವಹಕ್ಕನ್ನು ಗಂಭೀರವಾಗಿ ಗಮನಿಸಿದೆ. ಆ ದಿಕ್ಕಿನಲ್ಲಿ ವೈಜ್ಞಾನಿಕವಾಗಿಯೂ ಆಡಳಿತಾಂಗ ಮತ್ತು ಸಮಾಜ ಕೆಲಸಮಾಡುತ್ತಿರುವುದರಿಂದ ಬದುಕು ಸ್ವಲ್ಪಮಟ್ಟಿಗೆ ಸುಲಲಿತವಾಗಿದೆ, ಆದರೆ ಪ್ರಯತ್ನವನ್ನೂ ಮಾಡಿಯೂ ಒಬ್ಬ ಯಶಸ್ವಿಯಾಗುವುದಿಲ್ಲ, ಇನ್ನೊಬ್ಬ ಯಾವ ಪ್ರಯತ್ನವೂ ಇಲ್ಲದೆ ಯಶಸ್ಸಿನ ಮೆಟ್ಟಿಲನ್ನು ಸರ ಸರ ಏರುತ್ತಿರುತ್ತಾನೆ; ಹಾಗೆಯೇ ಸುಖ ಸೌಲಭ್ಯಗಳೂ. ಇದೇ ಬಹುಮಟ್ಟಿಗೆ ಇಂದು ವೈಯಕ್ತಿಕವಾಗಿ ಒಬ್ಬನಿಗೆ ದುಃಖದ ಪೀಡೆ. ಲೋಕಕ್ಕೆ ಅಂಟಿಕೊಳ್ಳುವ ಮತ್ತು ಈ ಲೋಕದ ಸುಖಕ್ಕಾಗಿ ಇನ್ನೊಬ್ಬರೊಂದಿಗೆ ಹೋಲಿಸಿಕೊಂಡು ಆ ಇನ್ನೊಬ್ಬನಲ್ಲಿ ಇದ್ದದ್ದು ತನ್ನಲ್ಲಿ ಇಲ್ಲ ಎಂದು ಅದಕ್ಕಾಗಿ ಹಂಬಲಿಸುವ, ಕಾತರಿಸುವ ಮನಸ್ಥಿತಿಯೇ ಒಬ್ಬನ ದುಃಖಕ್ಕೆ, ಮಾನಸಿಕ ಅಶಾಂತಿಗೆ ಕಾರಣ ಎಂದು ಸಾವಿಲ್ಲದ ಮನೆಯಿಂದ ಸಾಸಿವೆಕಾಳನ್ನು ತರಲು ಹೊರಡುವ ಮಗುವನ್ನು ಕಳೆದುಕೊಂಡ ತಾಯಿಯ ದೃಷ್ಟಾಂತದಿಂದ ತೋರಿಸಿ ದುಃಖರಹಿತ ಪ್ರಜ್ಞಾ ವಿಮುಕ್ತಿ, ಚೇತೋ ವಿಮುಕ್ತಿಯ ಬುದ್ಧತ್ವವನ್ನು ಪಡೆಯಲು ಮಾರ್ಗದರ್ಶನ ಮಾಡಿದ ಬುದ್ಧ, ಬದುಕಿರುವಾಗ ಮತ್ತು ಮರಣ ಹೊಂದಿದ ನಂತರವೂ ವ್ಯಕ್ತಿಗೆ ಸಹಾಯಹಸ್ತ ಚಾಚುವ ಬೋಧಿಸತ್ವ-ಬುದ್ಧ ಇಬ್ಬರೂ ಎಲ್ಲ ಕಾಲಕ್ಕೂ ಪ್ರಸ್ತುತವಾಗುತ್ತಾರೆ.

## ಹಿಂದೂ ಪುರಾಣಗಳು

ಬೌದ್ಧಧರ್ಮ ಮುಂದುಮಾಡುವ ಪತಿತರನ್ನು ಉದ್ಧಾರ ಮಾಡುವ ದೈವೀಕಾರುಣ್ಯದ ಕಲ್ಪನೆ ಶಿವ, ವಿಷ್ಣು , ದೇವಿ ಮುಂತಾದ ಪರದೈವ ಕೇಂದ್ರಿತ ಪುರಾಣಗಳಲ್ಲಿ ದೃಶ್ಯಾತ್ಮಕ ಕಥಾನಕಗಳಾಗಿವೆ. ಅವು ಸ್ಪಷ್ಟವಾಗಿ ದೈವಭಕ್ತಿ ಮತ್ತು ದೈವಕೇಂದ್ರಿತ ಶರಣಾಗತಿಯ ಮಹತ್ವವನ್ನು ನಿರೂಪಿಸುತ್ತವೆ. ಮನುಷ್ಯನ ಮಿತಿಯನ್ನೂ ಪರದೈವದ ಮಹತ್ತನ್ನೂ ಗಮನಕ್ಕೆ ತಂದು ವ್ಯಕ್ತಿ ಸನ್ಮಾರ್ಗದಲ್ಲಿ ಏಕೆ ಇರಬೇಕು, ತನ್ನನ್ನು ಸತ್ಪಥದಲ್ಲಿ ಇರಿಸು ಎಂದು ಏಕೆ ಬೇಡಿಕೊಳ್ಳಬೇಕು ಎಂಬುದನ್ನು ತರ್ಕಬದ್ಧಗೊಳಿಸುತ್ತವೆ. ಅಹಂಕಾರದ ವಿವಿಧ ರೂಪಗಳನ್ನು ವಿವರಿಸುವ ಪುರಾಣಗಳು ವ್ಯಕ್ತಿಯು ಎಚ್ಚರದಿಂದ ಇರಬೇಕಾದ ಮಾರ್ಗವನ್ನೂ ನಿಚ್ಚಳವಾಗಿಸುತ್ತವೆ. ಬೌದ್ಧಧರ್ಮದಂತೆ ಪುರಾಣಗಳೂ ಸಹ ವ್ಯಕ್ತಿಯೇ ತನ್ನ ಮುಕ್ತ ಬದುಕಿನ ಸಾಧ್ಯತೆಗಳನ್ನು ಮೊಟಕುಗೊಳಿಸುವ ದುಃಖದಿಂದ ಬಿಡುಗಡೆ ಪಡೆಯಲು ಸ್ವ ಇಚ್ಛೆಯಿಂದ ಮುಂದಾಗಬೇಕು ಎನ್ನುವ ಮಾರ್ಗಸೂಚನೆಯನ್ನು ನೀಡುತ್ತವೆ. ಹಾಗೆಯೇ ದೈವವೇ ಮುಂದಾಗಿ ಪವಾಡದಂಥ ಘಟನೆಗಳ ಮೂಲಕ ವ್ಯಕ್ತಿಯನ್ನು ಸನ್ಮಾರ್ಗಕ್ಕೆ ಕರೆತರುವುದನ್ನೂ ಗಮನಕ್ಕೆ ತರುತ್ತವೆ. ಇಂಥ ಹತ್ತಾರು ಹೆಚ್ಚಿನ ಸಾಧ್ಯತೆಗಳಿಂದಾಗಿ ಜನ ಬೌದ್ಧಧರ್ಮೀಯರಾಗಿರುವುದಕ್ಕಿಂತ ಹೆಚ್ಚು ಹಿಂದೂ ಧರ್ಮೀಯರೇ ಆಗಿರುವುದು, ಬೌದ್ಧಧರ್ಮೀಯರಾಗಿದ್ದೂ ಹಿಂದೂ ಧರ್ಮೀಯ ಆವರಣದಲ್ಲಿ ಇರುವುದು ಒಂದು ವಾಸ್ತವ ಸಂಗತಿ.

## ವಿವೇಕಾನಂದರು ಮತ್ತು ರಾಮಕೃಷ್ಣ ಮಿಷನ್

ಬೌದ್ಧಧರ್ಮ ಹೇಳುವಂತೆ ಬುದ್ಧನ ನಂತರ ಜನರನ್ನು ಬುದ್ಧ ಆಗುವ ಮಾರ್ಗದಲ್ಲಿ ಮುನ್ನಡೆಸಿದ ಯಾವ ಬೋಧಿಸತ್ವ-ಬುದ್ಧನಾಗಲೀ, ಇನ್ನೊಬ್ಬ ಬುದ್ಧ ಆದವನಾಗಲೀ ನಮ್ಮ ಪ್ರಪಂಚದಲ್ಲಿ ಕಂಡುಬಂದಿಲ್ಲ. ಟಿಬೆಟಿಯನ್ನರು ಎಲ್ಲಾ ದಲೈಲಾಮಾಗಳನ್ನು ಅವಲೋಕಿತೇಶ್ವರ ಬುದ್ಧನ ಅವತಾರ ಎಂದು ನಂಬುತ್ತಾರೆ. ಮೊದಲನೆಯ ಲಾಮಾ ಕಾಣಿಸಿಕೊಂಡದ್ದು ೧೪೫೧ರಲ್ಲಿ. ಈಗ ಇರುವ ದಲೈಲಾಮಾ ತಾವೇ ಕಡೆಯವರು ಎಂದು ಘೋಷಿಸಿದ್ದಾರೆ. ಆದರೆ ಬುದ್ಧ ಎನ್ನಬಹುದಾದ ಶ್ರೀರಾಮಕೃಷ್ಣರು ತಮ್ಮ ಕಾಲದಲ್ಲಿ ಮಾತ್ರವಲ್ಲದೆ ಈಗಲೂ ಜನರು ತಮ್ಮನ್ನು ದುಃಖಕ್ಕೀಡುಮಾಡುವ ಸಂಕುಚಿತ ಮನಸ್ಥಿತಿಯಿಂದ ಹೊರಬರಲು ಗುರುವೇ ಆಗಿದ್ದಾರೆ. ಕೋಟ್ಯಂತರ ಜನ ಜಗತ್ತಿನಾದ್ಯಂತ ರಾಮಕೃಷ್ಣರ ಭಕ್ತಿಭಾವ, ಸಂಯಮ, ಎಲ್ಲರನ್ನೂ ಪ್ರೀತಿ ಸ್ನೇಹಗಳಿಂದ ಒಳಗೊಳ್ಳುವ ಮನೋಭಾವಗಳಿಂದ ಪ್ರಭಾವಿತರಾಗುತ್ತಿದ್ದಾರೆ, ಅದರಂತೆ ತಮ್ಮ ಜೀವನವನ್ನು ಉದಾತ್ತವಾಗಿ ರೂಪಿಸಿಕೊಳ್ಳುವ ಹಾದಿಯಲ್ಲಿದ್ದಾರೆ. ಇದಕ್ಕೆ ಸಾಕ್ಷಿ ಜಗತ್ತಿನಾದ್ಯಂತ ಕೆಲಸ ಮಾಡುತ್ತಿರುವ ರಾಮಕೃಷ್ಣ ಮಿಷನ್-ಶಾಖೆಗಳು.

ವಿವೇಕಾನಂದರನ್ನು ಬೋಧಿಸತ್ವ-ಬುದ್ಧ ಎನ್ನಬಹುದು. ಅವರು ತಮ್ಮ ಸುತ್ತಲಿನವರ ದೀನಸ್ಥಿತಿಗೆ ಅತೀವವಾಗಿ ಮರುಗಿದರು. ಅವರನ್ನು ಆ ಸ್ಥಿತಿಯಿಂದ ಮೇಲಕ್ಕೆತ್ತಲು ಎಲ್ಲರೂ ಸಂಘಟನಾತ್ಮಕವಾಗಿ ಕೈಜೋಡಿಸಬೇಕು ಎಂದು ಯೋಚಿಸಿದರು, ಯೋಜಿಸಿದರು. ವಸಾಹತುಶಾಹಿ ಮನೋಭಾವ ಎದ್ದು ಕುಣಿಯುತ್ತಿದ್ದಾಗ ವಿವೇಕಾನಂದರು ಸಹಬಾಳುವೆಯನ್ನು ಪ್ರತಿಪಾದಿಸಿದರು. ಗೊತ್ತೇ ಇಲ್ಲದ ಭಾರತೀಯರನ್ನು ಪಾಶ್ಚಾತ್ಯರು ತಮ್ಮ ಪ್ರೀತಿಪಾತ್ರ ಸೋದರ ಸೋದರಿಯರು ಎಂದು ಭಾವಿಸುವಂತೆ ಮಾಡಿದರು. ಅವರು ದೀನ ದುರ್ಬಲರ ದುಃಖದುಮ್ಮಾನಗಳಿಗೆ ಸ್ಪಂದಿಸಿದರು. ತಾವೂ ಔದಾರ್ಯ-ಶ್ರೀಮಂತಿಕೆಯನ್ನು ಅನುಭವಿಸಿದರು, ಉಳಿದವರಿಗೂ ಅನುಭವಿಸಲು ಸಹಕರಿಸಿದರು. ಇದಕ್ಕೆ ವಿವೇಕಾನಂದರೊಂದಿಗೆ ಆತ್ಮೀಯವಾಗಿ ಸಂಪರ್ಕದಲ್ಲಿದ್ದ ಹಲವಾರು ವಿದೇಶೀ ಮಹಿಳೆಯರು, ಮಹನೀಯರೇ ಸಾಕ್ಷಿ. ರಾಮಕೃಷ್ಣ ಪರಮಹಂಸರು, ವಿವೇಕಾನಂದರು ಹಾಗೂ ಅವರು ಕಟ್ಟಿದ ಬೇಲೂರು ಮಠ, ಸ್ಥಾಪಿಸಿದ ರಾಮಕೃಷ್ಣ ಮಿಷನ್ ಇವು ವೇದೋಪನಿಷತ್ತುಗಳು ಎತ್ತಿಹಿಡಿಯುವ 'ಈಶಾವಾಸ್ಯಂ ಇದಂ ಸರ್ವಂ ಯತ್ಕಿಂಚಿತ್ ಜಗತ್ಯಾಂ ಜಗತ್। ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯ ಸ್ವಿದ್ಧನಂ'' ಎನ್ನುವ ತಾತ್ತ್ವಿಕತೆಯ ಜೀವಂತ ಮೂರ್ತಿಗಳು. ಬುದ್ಧ ಮತ್ತು ಬುದ್ಧತ್ವದಲ್ಲಿ ಅಡಕವಾಗಿರುವ ಕಾರುಣ್ಯಕ್ಕೆ ಹತ್ತು ಹಲವು ಆಯಾಮಗಳನ್ನು ಕೊಡುವ ಘನಮೂರ್ತಿಗಳು. *(ಸಮಾಪ್ತಿ)*